# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

## ಮಲ್ಲೇಶ್ವರಂ, ಬೆಂಗಳೂರು - 560003

**KARNATAKA SCHOOL EXAMINATION AND ASSESSMENT BOARD**
**Malleshwaram, Bangaluru – 560003**

**ಮೌಲ್ಯಾಂಕನ – ಮಾರ್ಚ್ 2024 - ಮಾದರಿ ಪ್ರಶ್ನೋತ್ತರ ಪತ್ರಿಕೆ**

**ತರಗತಿ : 9** **ವಿಷಯ – ಪ್ರಥಮ ಭಾಷೆ ಕನ್ನಡ** **ಅಂಕಗಳು - 100**

**ಸಮಯ - 3 ಗಂಟೆ 15 ನಿಮಿಷ**

**ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಶಿವಮೊಗ್ಗ ತಾ ಶಿವಮೊಗ್ಗ**

----------------------------------------------------------------------------------------------------

**ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ**

**ವಿದ್ಯಾರ್ಥಿಯ ಹೆಸರು :** ------------------------------------------------------------------------

**ವಿದ್ಯಾರ್ಥಿಯ SATS ಸಂಖ್ಯೆ :** ☐☐☐☐☐☐☐☐☐

**ವಿದ್ಯಾರ್ಥಿಯ ಸಹಿ :** ------

**ಶಾಲೆಯ ಡೈಸ್ ಕೋಡ್** ☐☐☐☐☐☐☐☐☐☐☐

**ಕ್ಲಸ್ಟರ್ :** --------------------- **ಬ್ಲಾಕ್ :** --------------------- **ಜಿಲ್ಲೆ :** --------------------

**ಶಾಲೆಯ ವಿಧ : ಸರ್ಕಾರಿ** ☐ **ಅನುದಾನಿತ** ☐ . **ಅನುದಾನ ರಹಿತ** ☐

**ಕೊಠಡಿ ಮೇಲ್ವಿಚಾರಕರ ಸಹಿ** --------------------------------

ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ

| ಪ್ರ.ಸಂಖ್ಯೆ | ಅಂಕ | ಪ್ರ.ಸಂಖ್ಯೆ | ಅಂಕ | ಪ್ರ.ಸಂಖ್ಯೆ | ಅಂಕ | ಪ್ರ.ಸಂಖ್ಯೆ | ಅಂಕ |
|---|---|---|---|---|---|---|---|
| 1 | | 15 | | 29 | | 43 | |
| 2 | | 16 | | 30 | | 44 | |
| 3 | | 17 | | 31 | | 45 | |
| 4 | | 18 | | 32 | | | |
| 5 | | 19 | | 33 | | | |
| 6 | | 20 | | 34 | | | |
| 7 | | 21 | | 35 | | | |
| 8 | | 22 | | 36 | | | |
| 9 | | 23 | | 37 | | | |
| 10 | | 24 | | 38 | | | |
| 11 | | 25 | | 39 | | | |
| 12 | | 26 | | 40 | | | |
| 13 | | 27 | | 41 | | | |
| 14 | | 28 | | 42 | | | |
| | | | | | | | |

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) -----------------------------------------------------

ಮೌಲ್ಯಮಾಪಕರ ಸಹಿ : ----------------------------

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **(6 X 1 = 06 )**

1. **ಕನ್ನಡ ವರ್ಣಮಾಲೆಯಲ್ಲಿ ಈ ಅಕ್ಷರಗಳನ್ನು 'ಅನುನಾಸಿಕಾಕ್ಷರಗಳು' ಎಂದು ಕರೆಯುತ್ತಾರೆ.**

   A) ಅ, ಆ B) ಐ, ಔ

   C) ಕ, ಖ D) ಣ, ನ

2. **ತಾವು ಹೇಳಿದರೆ ಖಂಡಿತವಾಗಿಯೂ ಅವರು ನಮ್ಮ ಕೆಲಸವನ್ನು ಮಾಡಿಕೊಡುತ್ತಾರೆ. -------- ಈ ವಾಕ್ಯದಲ್ಲಿನ ಆತ್ಮಾರ್ಥಕ ಸರ್ವನಾಮ ಪದ.**

   ಎ) ಅವರು ಬಿ) ನಮ್ಮ

   ಸಿ.) ಕೆಲಸ ಡಿ) ತಾವು

3. **ಗುರುಗಳ ಹಿತೋಪದೇಶ ಬದುಕಿಗೆ ದಾರಿದೀಪ. ಇಲ್ಲಿ 'ಹಿತೋಪದೇಶ' ಎಂಬ ಪದವು ಈ ಸಂಧಿಗೆ ಉದಾಹರಣೆಯಾಗಿದೆ.**

   ಎ) ಆದೇಶ ಸಂಧಿ ಬಿ) ಲೋಪಸಂಧಿ

   ಸಿ.) ಆಗಮಸಂಧಿ ಡಿ) ಗುಣಸಂಧಿ.

4. **ಸಂಬೋಧನೆಯ ಮುಂದೆ ಹಾಗೂ ಕರ್ತೃ,ಕರ್ಮ,ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಈ ಲೇಖನ ಚಿಹ್ನೆ ಬಳಸುತ್ತಾರೆ.**

   ಎ) ಪೂರ್ಣ ವಿರಾಮ ಬಿ) ಭಾವಸೂಚಕ

   ಸಿ.) ಅಲ್ಪವಿರಾಮ ಡಿ) ಅರ್ಧವಿರಾಮ

5. **ಸಕ್ಕದಮಂ ಪೇಳ್ವೊಡೆ ನೆಱೆ ಸಕ್ಕದಮಂ ಪೇಳ್ಗೆ ಇಲ್ಲಿ 'ಸಕ್ಕದಮಂ' ಪದದ ಹೊಸಗನ್ನಡ ರೂಪ.**

   ಎ) ಸಂಸ್ಕೃತವು ಬಿ) ಸಂಸ್ಕೃತವನ್ನು

   ಸಿ.) ಸಂಸ್ಕೃತಕ್ಕೆ ಡಿ) ಸಂಸ್ಕೃತ

6. **ಹೆದ್ದಾರಿಯ ಇಕ್ಕೆಲಗಳಲ್ಲಿ ಮರಗಳನ್ನು ನೆಟ್ಟಿದ್ದಾರೆ. ಇಲ್ಲಿ 'ಹೆದ್ದಾರಿ' ಪದದಲ್ಲಿರುವ ಸಮಾಸ ಇದಾಗಿದೆ.**

   ಎ) ತತ್ಪುರುಷ ಬಿ) ದ್ವಿಗು

   ಸಿ.) ದ್ವಂದ್ವ ಡಿ) ಕರ್ಮಧಾರೆಯ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4X1=04**

7. ಮಾಡಲಿ : ವಿದ್ಯರ್ಥಕ ಕ್ರಿಯಾಪದ : : ಮಾಡನು : -------------
8. ಕಂದಪದ್ಯ : ನಾಲ್ಕು ಸಾಲು : : ಷಟ್ಪದಿ : ------------
9. ಸಾಕು : ಕ್ರಿಯಾರ್ಥಕಾವ್ಯಯ : : ಥಣಥಣ : -------------
10. ಸಪ್ತಮಿ : ಅಲ್ಲಿ : : ಪ್ರಥಮ : -------------

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7X1=07**

ತಮ್ಮನೇ, ರಘು ವಂಶೋತ್ತಮನಾದ ನೀನು ವೃದ್ಧರಿಗೂ ತರುಣರಿಗೂ ಸ್ನೇಹಪರನಾಗಿದ್ದೀಯಾ? ನಿನ್ನ ದುರ್ಗಗಳಲ್ಲಿ ಧನಧಾನ್ಯ ಜಲಗಳು ಸಮೃದ್ಧಿಯಾಗಿವೆಯೇ? ಅವು ಯಂತ್ರ-ಯಂತ್ರಜ್ಞರಿಂದಲೂ ಶಿಲ್ಪಿಗಳು, ಆಯುಧಗಳು ಹಾಗೂ ಧನುರ್ಧಾರಿಗಳಾದ ಸೈನಿಕರಿಂದಲೂ ಪೂರ್ಣವಾಗಿವೆಯೇ? ನಿನ್ನ ಆದಾಯವೂ ವ್ಯಯಕ್ಕಿಂತ ಹೆಚ್ಚಿದೆ ತಾನೆ? ರಾಜ್ಯದ ಬೊಕ್ಕಸದಲ್ಲಿ ನೀನು ಸಂಗ್ರಹಿಸುವ ಸಂಪತ್ತೆಲ್ಲವೂ ರಾಜ್ಯದ ಅಭಿವೃದ್ಧಿಯ ಕೆಲಸಕಾರ್ಯಗಳಿಗೇ ವಿನಿಯೋಗವಾಗುತ್ತಿದೆಯಷ್ಟೆ? ಖಜಾನೆಯನ್ನು ಬರಿದುಗೊಳಿಸಬೇಡ. ಹಾಗೆಂದು ಅದನ್ನು ತುಳುಕುವಷ್ಟು ತುಂಬಿಸಿಕೊಳ್ಳಲು ಅನರ್ಥ,ಅನ್ಯಾಯಗಳ ಮಾರ್ಗವನ್ನು ಹಿಡಿಯಬೇಡ.

11. ಯಾರಿಗೆ ಸ್ನೇಹಪರನಾಗಿರು ಎಂದು ರಾಮನು ಭರತನಿಗೆ ಹೇಳುತ್ತಾನೆ?

12. ಆದಾಯವು ಯಾವುದರಿಂದ ಹೆಚ್ಚಿರಬೇಕು?

13. ಸಂಪತ್ತು ಯಾವುದಕ್ಕೆ ವಿನಿಯೋಗವಾಗಬೇಕು?

14. ಯಾವ ಮಾರ್ಗವನ್ನು ಹಿಡಿಯಬೇಡ ಎಂದು ರಾಮನು ಹೇಳುತ್ತಾನೆ?

**ಕೊಟ್ಟಿರುವ ಪದ್ಯಭಾಗವನ್ನು ಓದಿಕೊಂಡು 15 ಮತ್ತು 16ನೇ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

ಭರತ ಭೂತಳಕೆ ಸಿಂಗಾರವಾದಯೋಧ್ಯಾ
ಪುರದೊಳು ಮೂಲೋಕ ಪೊಗಳೆ
ಭರತಚಕ್ರೇಶ್ವರ ಸುಖಬಾಳುತಿರ್ದನಾ
ಸಿರಿಯನಿನ್ನೇನ ಬಣ್ಣಿಪೆನು

15. ಭರತನು ಯಾವ ನಗರವನ್ನು ಆಳುತ್ತಿದ್ದನು?

16. ಭರತನನ್ನು ಹೊಗಳುತ್ತಿದ್ದ ಮೂರು ಲೋಕಗಳು ಯಾವುವು?

**ಭೂಮಿಯಲಿ ಭುಜಂಗನ ಭಯ, ಆಕಾಶದಲಿ ಗಿಡುಗನ ಭಯ**
**ಆವರಿಸಿದ್ದರೂ ಅಳುಕದೆ ರೆಕ್ಕೆ ಬಿಚ್ಚಿ ಹಾರುವುದು ಪುಟ್ಟಹಕ್ಕಿ**

17. ಭೂಮಿ ಆಕಾಶದಲ್ಲಿ ಪುಟ್ಟಹಕ್ಕಿಗೆ ಯಾರ ಭಯವಿದೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10X2=20**

**(ಪ್ರಶ್ನೆ ಸಂಖ್ಯೆ 18 ಮತ್ತು 19ಕ್ಕೆ ನೀಡಿರುವ ಗದ್ಯ ಓದಿಕೊಂಡು ಉತ್ತರಿಸಿ)**

ಸ್ವಾಮಿಯಂಥವರನ್ನು ನೋಡಿದರೆ ನನಗೆ ನಮ್ಮ ದೇಶದಲ್ಲಿ ಇತರರು ಹೇಳುವಂತೆ 'ಅದ್ಭುತ ಆಶ್ಚರ್ಯ'ಗಳಾಗುತ್ತಿರಲಿಲ್ಲ. ಮೇಧಾಶಕ್ತಿಯುಳ್ಳ ಯಾವ ವ್ಯಕ್ತಿಯಾದರೂ ಅವರಂತೆ ಹಲವು ಕ್ಷೇತ್ರಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡು, ಕಾಡುಹರಟೆಯಲ್ಲಿ ಕಾಲ ಕಳೆಯದೆ, ಜ್ಞಾನಾರ್ಜನೆ ಸಂಶೋಧನೆಗಳಲ್ಲಿ ಜೀವನದ ಸಂತೋಷವನ್ನು ಕಾಣುವ ಅಭ್ಯಾಸ ಮಾಡಿಕೊಂಡರೆ ಅವರಂತೆಯೇ 'ಅದ್ಭುತ'ರಾಗಬಹುದು. ಪಶ್ಚಿಮ ದೇಶಗಳಲ್ಲಿ ಅಂಥವರು ಹಲವರಿದ್ದಾರೆ. ಆದರೆ ನಮ್ಮ ದೇಶದ ಸದ್ಯದ ದುರದೃಷ್ಟ; ಮೇಧಾಶಕ್ತಿ ಇರುವ ಅನೇಕರು ಇತರ ಆಕರ್ಷಣೆಗೆ ರೋಗ ಬಡಿಯುತ್ತದೆ. ವಿದ್ವತ್ತು ಸಂಶೋಧನೆಗಳಲ್ಲಿ ಸ್ವಲ್ಪ ಮೇಲೆ ಏರಿದ ತಕ್ಷಣ ತಾನು ಪ್ರೊಫೆಸರನಾಗಲಿಲ್ಲವೆಂಬ ಕೊರಗು ಹತ್ತುತ್ತದೆ. ಜ್ಞಾನದ ಬೆಳವಣಿಗೆಯಲ್ಲೇ ಜೀವನ ಸಂತೋಷದ ರುಚಿ ಅವರಿಗೆ ಹತ್ತುವುದೇ ಇಲ್ಲ.

18. ಸ್ವಾಮಿಯವರನ್ನು ನೋಡಿದರೆ ಭೈರಪ್ಪ ಅವರಿಗೆ ಏಕೆ ಅದ್ಭುತ ಆಶ್ಚರ್ಯಗಳಾಗುತ್ತಿರಲಿಲ್ಲ?

19. ನಮ್ಮ ದೇಶದ ದುರದೃಷ್ಟತೆ ಯಾವುದು ಎಂದು ಲೇಖಕರು ಹೇಳುತ್ತಾರೆ?

ಪ್ರಶ್ನೆ ಸಂಖ್ಯೆ 20 ಮತ್ತು 21ಕ್ಕೆ ಚಿತ್ರ ಆಧರಿಸಿ ಉತ್ತರಿಸಿ.



20. ಚಿತ್ರದಲ್ಲಿರುವ ಜನಪದ ಕಲಾ ಪ್ರಕಾರ ಹುಟ್ಟಿಕೊಂಡ ಬಗೆ ಹೇಗೆ?

21. ಈ ಕಲೆಯನ್ನು ಯಾವ ಸಂದರ್ಭದಲ್ಲಿ ಬಳಸುತ್ತಾರೆ?

**(ಪ್ರಶ್ನೆ 22 ಮತ್ತು 23ಕ್ಕೆ ನೀಡಿದ ಪದ್ಯ ಆಧರಿಸಿ ಉತ್ತರಿಸಿ)**

ಬಿನ್ನಹ ಗುರುವೆ ಧ್ಯಾನಕೆ ಬೇಸರವಾದಾಗ
ನಿನ್ನನಾದಿಯ ಮಾಡಿಕೊಂಡು
ಕನ್ನಡದೊಳಗೊಂದು ಕಥೆಯ ಪೇಳುವೆನದು
ನಿನ್ನಾಜ್ಞೆ ಕಂಡ ನನ್ನೊಡೆಯಾ

22. ಧ್ಯಾನ ಬೇಸರವಾದಾಗ ಏನು ಮಾಡುತ್ತೇನೆಂದು ಕವಿ ಹೇಳುತ್ತಾನೆ?

ಗುರುವಿಂದು ಬೆಸಸೆ ಭಿಕ್ಷೆಗೆ
ಬರುತಿರೆ ಪಿಡಿತಂದರೆಮ್ಮನಾ ದೆಸೆಗೆ ಭಯಂ
ಪುರುಳಿಲ್ಲ ನಿನ್ನ ಕೇಡಂ
ಪರಿವೀಕ್ಷಿಸಿ ಕರುಣದಿಂದೆ ತಲ್ಲಣಿಸಿದಪೆಂ

23. ಅಭಯರುಚಿ ತಲ್ಲಣಗೊಳ್ಳಲು ಕಾರಣವೇನು?

24. ಮಹಾರಾಜರ ಆಳ್ವಿಕೆಯ ಕಾಲದಲ್ಲಿ ಮೈಸೂರು ಕಲಾವಿದರಿಗೆ ಪ್ರೋತ್ಸಾಹ ನೀಡುವ ಕೇಂದ್ರವಾಗಿತ್ತು. ತುತ್ತಿನ ಚೀಲ ತುಂಬಿಸುವ ಸಲುವಾಗಿ ರಂಗರಾವ್ ಕುಟುಂಬ 1940ರ ಸುಮಾರಿಗೆ ಮೈಸುರಿಗೆ ಸ್ಥಳಾಂತರಗೊಂಡಿತು.

**ಪಂಢರಿಬಾಯಿಯವರ ಕುಟುಂಬ ಮೈಸೂರಿಗೆ ಸ್ಥಳಾಂತರಗೊಳ್ಳಲು ಕಾರಣವೇನು?.**

25. ಹೊಳೆಬಾಗಿಲಿನಲ್ಲಿ ನಿಮ್ಮ ಮನದ ಬಾಗಿಲು ತೆರೆದುಕೊಳ್ಳುತ್ತದೆ. ದಡ ಈಗ ಸಮೀಪಿಸುತ್ತಿದೆ. ಹೊಳೆಯ ಅಂಚು ದಡದ ಅಂಚಿಗೆ ಸೇರಿದ ಜಾಗ ಅಗೋ ಕಾಣುತ್ತದೆ. ಪಯಣ ಮುಗಿದಿದೆ.


**ಲಾಂಚು ತನ್ನ ಪಯಣ ಮುಗಿಸಿದಾಗ ಜನರು ಹೇಗೆ ಹೊರಡುತ್ತಾರೆ?**

26. 'ನನ್ನಾಸೆ' ಕವನದಲ್ಲಿ ಕವಯಿತ್ರಿ ಮುಸ್ಸಂಜೆ ಹೊಸ್ತಿಲಲ್ಲಿ ದಿಕ್ಕಿಲ್ಲದೆ ನರಳಾಡುವ ದೀನರ ಊರುಗೋಲು ನಾನಾಗಬೇಕು….ಎನ್ನುವ ಮಾತಿನ ಸ್ವಾರಸ್ಯವೇನು?

27. "ಆಗ್ಲಿ ನಿಮ್ಮಂಗ ಪ್ರಾಣದ ಹಂಗುತೊರ್ದು ದೇಶಕ್ಕಾಗಿ ನಾನಾಗ್ಲೀ, ನಮ್ ಮಕ್ಳಾಗ್ಲೀ ಏನೂ ಮಾಡಿಲ್ಲ. ಈಗ ಇಷ್ಟಾದರೂ ನಮ್ಮಿಂದ ಆಗ್ತದಲ್ಲ. ಎಂದು ದುರ್ಗಪ್ಪ ಹೇಳಲು ಕಾರಣವೇನು?

**V. ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2X3=06**

28. ಈ ಚಿತ್ರದಲ್ಲಿರುವ ಸಾಹಿತಿಯನ್ನು ಗುರುತಿಸಿ ಕಾಲ,ಸ್ಥಳ,ಕೃತಿ,ಪ್ರಶಸ್ತಿಗಳ ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.



29. ನಡುಗನ್ನಡದ ಅಗ್ರಮಾನ್ಯ ಕವಿಗಳಲ್ಲಿ ರಾಘವಾಂಕನು ಒಬ್ಬ. ರಗಳೆ ಕವಿ ಹರಿಹರನ ಸೋದರಳಿಯ ಮತ್ತು ಶಿಷ್ಯ. ಹಂಪಿಯ ವಿರೂಪಾಕ್ಷನ ಪರಮಭಕ್ತ. ಈ ಕವಿಯ ಕಾಲ, ಸ್ಥಳ, ಕೃತಿ ಮತ್ತು ಬಿರುದುಗಳ ಬಗ್ಗೆ ವಾಕ್ಯರೂಪದಲ್ಲಿ ಬರೆಯಿರಿ.

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1X3=03**

30. ಸುಲಿದ ಬಾಳೆಯ ಹಣ್ಣಿನಂದದಿ
ಕಳಿದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರ ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ ಬರೆಯಿರಿ. 1X3=03**

31. ಸಾವಿತ್ರಿಯ ಮುಖಕಮಲ ಅರಳಿತು.

**VIII. ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1X3=03**

32. ಎ) ಆರೋಗ್ಯವೇ ಭಾಗ್ಯ.

ಬಿ) ಕೊಟ್ಟಿದ್ದು ತನಗೆ; ಬಚ್ಚಿಟ್ಟಿದ್ದು ಪರರಿಗೆ.

**IX. ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯಿರಿ.** **6X3=27**

33. "ಗಂಡಸರೂ ರಂಗುರಾಯರೇ"

34. "ಮಾನವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ"

35. "ಆದಷ್ಟು ಬೇಗ ಹೊನ್ನಾವರದ ಮೇಲೆ ದಾಳಿ ಮಾಡಬೇಕು"

36. "ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ"

37. "ನರಕದೊಳ್ ನಿವಾರಣೆವಡೆವಯ್"

38. "ಮಹಾತ್ಮರ ಕೈಗೆ ಬೆತ್ತ ನಾನಾದೆ"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1X4=04**

39. ಹೇಮಂತ ------- ------------------------

--------------------------------------------

---------------------------------------------

-----------------------------------ಮರುತನಿಲ್ಲ

**ಅಥವಾ**

ಹೇಮಂತನಾಳಿಕೆಯು-------------------------

--------------------------------------------

--------------------------------------------

------------------------------ಜೀವಗಳ ಧರ್ಮ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ.** **1X4=04**

40. ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ ವಾಮನಕ್ರಮಂ।
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ ಹರನಂ ನರನೊತ್ತಿ ಗಂಟಲಂ।
ಮೆಟ್ಟುಗೆ ಮೆಟ್ಟದಿರ್ಕೆ ಕವಿಗಳ್ ಕೃತಿಬಂಧದೊಳಲ್ತೆ ಕಟ್ಟಿದರ್।
ಮುಟ್ಟಿದರೊತ್ತಿ ಮೆಟ್ಟಿದರದೇನಳವಗ್ಗಳಮೋಕವೀಂದ್ರರಾ॥

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2X4=08**



41. ವೃದ್ಧಮಾಹೇಶ್ವರನನ್ನು ಕವಿ ಹೇಗೆ ವರ್ಣಿಸಿದ್ದಾನೆ? ವಿವರಿಸಿ..

**ಅಥವಾ**

ಮದುವೆ ಮಂಟಪದಲ್ಲಿ ವೃದ್ಧನು ಮಾಡಿದ ಅವಾಂತರಗಳನ್ನು ವಿವರಿಸಿ.

42. 'ಹೊಸಹಾಡು' ಪದ್ಯದ ಮೂಲಕ ನಿಮ್ಮ ಬದುಕು ಹೇಗೆ ನಿತ್ಯನೂತನವಾಗುತ್ತದೆ? ವಿವರಿಸಿ.

**ಅಥವಾ**

'ಹೊಸಹಾಡು' ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ ಬರೆಯಿರಿ.

**XIII. ಈ ಕೆಳಗಿನ ಪದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X4=4(2+2)**

43. ಬೋಧಿವೃಕ್ಷದ ಅಡಿಯಲ್ಲಿ ಸಿದ್ಧಾರ್ಥನಿಗೆ ಜ್ಞಾನೋದಯವಾಗಿ ಬುದ್ಧನಾದನು. ಆ ಸಂದರ್ಭದಲ್ಲಿ ಮರದ ಆಶ್ರಯ ಪಡೆದ ಬಳ್ಳಿಯು ಹೂ ಅರಳಿಸಿ ಸುಗಂಧವನ್ನು ಹೊರಸೂಸಿತು. ತಾಯಿ ಹಕ್ಕಿಯೊಂದು ತನ್ನ ಮರಿಗೆ ಆಹಾರವನ್ನು ಕೊಟ್ಟು ಸಂತೋಷದಿಂದ ಹಾರಾಡಿತು. ಇರುವೆಗಳು ಹುತ್ತದಿಂದ ಸಾಲು ಸಾಲಾಗಿ ಹೊರಗೆ ಬರುವಂತೆ, ಬೆಳ್ಳಕ್ಕಿಗಳು ಗುಂಪು ಗುಂಪಾಗಿ ಉದ್ದನೆಯ ಸಾಲು ಮಾಡಿ ಆಕಾಶಕ್ಕೆ ಏಣಿ ಹಾಕಿದಂತೆ, ಪ್ರಕೃತಿಯಲ್ಲಿ ವಿಸ್ಮಯ ಕಂಡು ಬಂದಿತು. ಪ್ರಪಂಚದ ಐಹಿಕ ಸುಖಗಳಿಂದ ದೂರವಾದ ಸಿದ್ಧಾರ್ಥನ ಮನಸ್ಸು ಸಂತೋಷದಿಂದ ನಲಿಯಿತು. ಕಾಡಿನ ತುಂಬಾ ಪ್ರೀತಿಯೆಂಬ ಅಲೆಯು ನೀರಿನಂತೆ ಹರಿಯಿತು. ಹಕ್ಕಿಗಳ ಗೂಡಿನಲ್ಲಿ ಹಾಡು ಹುಟ್ಟಿ ಹೊಸರಾಗ ಹಾಡುವಂತೆ, ಹೂವಿನಲ್ಲಿರುವ ಮಕರಂದವನ್ನು ಸವಿಯಲು ದುಂಬಿಯು ಹೂವನ್ನು ಸೇರುವಂತೆ, ಮರಗಿಡಗಳು ಪರಸ್ಪರ ಅಪ್ಪಿಕೊಂಡು ಕುಣಿವಂತೆ, ಸಿದ್ಧಾರ್ಥನು ತನಗೆ ಆದ ಜ್ಞಾನದ ಅನುಭವವನ್ನು ಜನರಿಗೆ ತಿಳಿಸಲು ಸಂತೋಷದಿಂದ ಮುಂದೆ ನಡೆದನು.

1. ಸಿದ್ಧಾರ್ಥನು ತನಗೆ ಆದ ಜ್ಞಾನದ ಅನುಭವವನ್ನು ಜನರಿಗೆ ತಿಳಿಸಲು ಹೇಗೆ ಬಂದನು?
2. ಸಿದ್ಧಾರ್ಥನಿಗೆ ಜ್ಞಾನೋದಯವಾದಾಗ ಪ್ರಕೃತಿಯಲ್ಲಾದ ವಿಸ್ಮಯವನ್ನು ತಿಳಿಸಿ.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1X5=05**

44. ನಿಮ್ಮನ್ನು ಶಿಕಾರಿಪುರದ ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ರವಿ / ರಾಗಿಣಿ ಎಂದು ಭಾವಿಸಿಕೊಂಡು 'ಶ್ರೀ ರಾಮಾಯಣ ದರ್ಶನಂ' ಪುಸ್ತಕವನ್ನು ಕಳುಹಿಸಿ ಕೊಡುವಂತೆ ಕೋರಿ ವ್ಯವಸ್ಥಾಪಕರು ಸ್ವಪ್ನಾ ಬುಕ್ ಹೌಸ್ ಬೆಂಗಳೂರು ಇವರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಹುಬ್ಬಳ್ಳಿ ತಾಲ್ಲೂಕಿನ ಬೊಮ್ಮಸಮುದ್ರದ ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿ ಪ್ರಕಾಶ್ / ವಿಜಯಕುಮಾರಿ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಕೈಗೊಂಡ 'ಶೈಕ್ಷಣಿಕ ಪ್ರವಾಸದ' ಅನುಭವವನ್ನು ಸೊರಬದಲ್ಲಿ ವಾಸವಿರುವ ರಾಮಚಂದ್ರ/ಸೀತಾ ಎಂಬ ನಿಮ್ಮ ಗೆಳೆಯನಿಗೆ ಒಂದು ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ. 1X5=05**

45. * ರಾಷ್ಟ್ರೀಯ ಹಬ್ಬಗಳ ಮಹತ್ವ
    * ಗಣಕ ಯಂತ್ರದ ಸದುಪಯೋಗ